# ಶ್ರೀರಾಮಕೃಷ್ಣ ಪ್ರಣಾಮ ಮಂತ್ರ

ಸ್ವಾಮಿ ಭಜನಾನಂದ



(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಶ್ರೀರಾಮಕೃಷ್ಣ ಭಕ್ತಸಮುದಾಯದಲ್ಲಿ ಸ್ವಾಮಿ ವಿವೇಕಾನಂದರಿಂದ ರಚಿತವಾದ ಶ್ರೀರಾಮಕೃಷ್ಣಪ್ರಣಾಮ ಮಂತ್ರ ಅತ್ಯಂತ ಪ್ರಸಿದ್ಧವಾದುದು. ಫೆಬ್ರವರಿ ಸಂಚಿಕೆಯಲ್ಲಿನ ಈ ಮಂತ್ರದ ಕುರಿತಾದ ಪೂಜ್ಯ ಸ್ವಾಮಿ ಭಜನಾನಂದಜೀಯವರ ಚಿಂತನೆಗಳನ್ನು ಇಲ್ಲಿ ಮುಂದುವರಿಸಲಾಗಿದೆ. ಮೂಲ ಆಂಗ್ಲ ಭಾಷೆಯಲ್ಲಿರುವ ಈ ಲೇಖನದ ಅನುವಾದ ಸಂಪಾದಕರದು.

## ಸರ್ವಧರ್ಮಸ್ವರೂಪಿಣೇ

**ಪ್ರಣಾಮ** ಮಂತ್ರದ ಎರಡನೆಯ ವಾಕ್ಯಾಂಗವು ಶ್ರೀರಾಮಕೃಷ್ಣರನ್ನು 'ಎಲ್ಲ ಧರ್ಮಗಳ ಮೂರ್ತರೂಪ' ಎಂದು ವಿವರಿಸುತ್ತದೆ. ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ಎಲ್ಲ ಧರ್ಮಗಳ ಮೂಲಭೂತ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದರ ಮೂಲಕ ಎಲ್ಲ ಧರ್ಮಗಳನ್ನು ಸಮನ್ವಯಗೊಳಿಸಿದರು ಎಂಬುದನ್ನು ಇದು ಸೂಚಿಸುತ್ತದೆ. ಶ್ರೀರಾಮಕೃಷ್ಣರು ಧರ್ಮಸಮನ್ವಯಾಚಾರ್ಯರೆಂದೇ ಪ್ರಸಿದ್ಧರಾಗಿರುವರು. ಇದೊಂದು ದೊಡ್ಡ ವಿಷಯ, ಇಲ್ಲಿ ಇದನ್ನು ವಿಸ್ತೃತವಾಗಿ ಚರ್ಚಿಸಲಾಗುವುದಿಲ್ಲ. ಇಲ್ಲಿ ನಾನು ಈ ತತ್ತ್ವದ ಹೆಚ್ಚು ಪ್ರಚಲಿತವಲ್ಲದ ಕೆಲವು ಮುಖ್ಯಾಂಶಗಳನ್ನು ಪ್ರಸ್ತಾಪಿಸುತ್ತೇನೆ.

ಮೊದಲನೆಯದಾಗಿ, ಪ್ರತಿಯೊಂದು ಧರ್ಮವನ್ನೂ ಅದರ ಅನುಯಾಯಿಗಳ ದೃಷ್ಟಿಯಿಂದಲೇ ನೋಡಬೇಕೆಂದು ಶ್ರೀರಾಮಕೃಷ್ಣರು ಬಯಸಿದರು. ಇದನ್ನು ಅವರು ತಮ್ಮ ಜೀವನದ ಮೂಲಕವೆ ಬೋಧಿಸಿದರು. ಅವರು ಹಿಂದುವಿನ ದೃಷ್ಟಿಯಿಂದ ಇಸ್ಲಾಂ ಧರ್ಮವನ್ನು ತಿಳಿಯಲು ಪ್ರಯತ್ನಿಸಲಿಲ್ಲ. ಇಸ್ಲಾಂ ಸಾಧನೆಯನ್ನು ಮಾಡಲು ಅವರು ಮುಸ್ಲಿಮರಂತೆಯೇ ಜೀವನ ನಡೆಸಿದರು. ಹಾಗೆಯೇ ಕ್ರಿಶ್ಚಿಯನ್ ಸಾಧನೆಯನ್ನು ಮಾಡುವಾಗ ಅವರು ಕಾಳೀ ಮಂದಿರಕ್ಕೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು. ಬೈಬಲ್, ಕೊರಾನ್ ಮತ್ತು ತ್ರಿಪಿಟಕಗಳಿಗೆ ವೇದಾಂತಪರ ವ್ಯಾಖ್ಯಾನಮಾಡಲು ಸಾಧ್ಯ. ಆದರೆ ಅದು ಕ್ರೈಸ್ತಧರ್ಮವಾಗಲಿ, ಇಸ್ಲಾಂ ಆಗಲಿ ಅಥವಾ ಬೌದ್ಧ ಧರ್ಮವಾಗಲಿ ಆಗಿರಲಾರದು. ಈ ಎಲ್ಲ ಧರ್ಮಗಳೂ ಶತ-ಶತಮಾನಗಳ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿರುವುವು. ಈ ಸಂಪ್ರದಾಯದೊಡನೆ ನಮ್ಮನ್ನು ಮೇಳವಿಸಿಕೊಳ್ಳುವುದರಿಂದ ಮಾತ್ರ ನಾವು ಆ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲೆವು. ಆಧುನಿಕ ಧರ್ಮಗಳ ತುಲನಾತ್ಮಕ ಅಧ್ಯಯನದಲ್ಲಿ ಈ ವಿಧಾನವನ್ನು 'ವೈಶಿಷ್ಟ್ಯಪರ ವಿಧಾನ' (*Phenomenological method*) ಎಂದು ಕರೆದಿರುವರು. ಶ್ರೀರಾಮಕೃಷ್ಣರ ವಿಧಾನವು ಸಂಪೂರ್ಣ ಪಾರಮಾರ್ಥಿಕವಾದುದು, ಆದರೆ ಆಧುನಿಕ ವೈಶಿಷ್ಟ್ಯಪರ ವಿಧಾನವು ಮಾತ್ರ ಲೌಕಿಕವಾದುದು. ಆದರೂ ಪ್ರಪಂಚದ ಧರ್ಮಗಳ ಸಂಬಂಧವಾಗಿ ಮಾನವನ ಭಾವನೆಯು ಈಗ ಬದಲಾಗಿರುವುದಕ್ಕೆ ಮುಖ್ಯ ಕಾರಣ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳು ಎಂಬುದನ್ನು ಅಲ್ಲಗಳೆಯುವಂತಿಲ್ಲ.

*ಶೀರ್ಷಿಕೆಯ ಚಿತ್ರ*

ರಾಮಕೃಷ್ಣ ಮಹಾಸಂಘದ ಕೇಂದ್ರಸ್ಥಾನವಾದ ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣ ಮಂದಿರ.

ಇಷ್ಟೇ ಅಲ್ಲದೆ ಶ್ರೀರಾಮಕೃಷ್ಣರು ಸಮನ್ವಯ ಭಾವನೆಗೆ ಒಂದು ಹೊಸ ಅರ್ಥವನ್ನು ಕೊಟ್ಟರು. ಸಮನ್ವಯವೆಂಬುದು ಅತ್ಯಂತ ಪುರಾತನ ಭಾರತೀಯ ಭಾವನೆ. ಇದನ್ನು ನಾವು ಸುಮಾರು ಕ್ರಿ.ಪೂ. ೩೦೦ ವರ್ಷಗಳಿಗಿಂತಲೂ ಹಿಂದೆ ರಚಿತವಾದ 'ಬ್ರಹ್ಮಸೂತ್ರ'ಗಳಲ್ಲಿ ಕಾಣುತ್ತೇವೆ. ಅಲ್ಲಿ ಅದು 'ಐಕ್ಯಾರ್ಥವಾದ'ವೆಂಬ ಒಂದು ಶಾಸ್ತ್ರ ವ್ಯಾಖ್ಯಾನ ಸಿದ್ಧಾಂತವನ್ನು ಆಧರಿಸಿದೆ. ಈ ಸಿದ್ಧಾಂತದ ಪ್ರಕಾರ ಶಾಸ್ತ್ರವು ಒಂದೇ ತತ್ತ್ವವನ್ನು ಉಪದೇಶಿಸುತ್ತದೆ. ಆ ಏಕತತ್ತ್ವವು ಯಾವುದೆಂಬುದು ವೇದಾಂತದ ಆಚಾರ್ಯರುಗಳಲ್ಲಿ ವಾದ-ವಿವಾದದ ವಿಷಯವಾಗಿದೆ. ಶಂಕರಾಚಾರ್ಯರ ಪ್ರಕಾರ ಉಪನಿಷತ್ತುಗಳು ಬೋಧಿಸುವ ನಿಜವಾದ ತತ್ತ್ವ ಅದ್ವೈತ. ಈಗ ಉಪನಿಷತ್ತಿನಲ್ಲಿ ದ್ವೈತಪರ ಹೇಳಿಕೆಗಳಿದ್ದರೆ ಅವನ್ನು ಅದ್ವೈತಕ್ಕೆ ಅನ್ವಯವಾಗುವ ರೀತಿಯಲ್ಲಿ ಅವರು ವ್ಯಾಖ್ಯಾನ ಮಾಡುತ್ತಾರೆ. ಇದನ್ನೇ ಸಮನ್ವಯವೆಂದು ಕರೆಯುವುದು. ರಾಮಾನುಜ ಮತ್ತು ಮಧ್ವರೂ ಇದೇ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ. ಆದರೆ ಅವರ ಪ್ರಕಾರ ಉಪನಿಷತ್ತುಗಳು ಬೋಧಿಸುವ ಏಕತತ್ತ್ವವು ಕ್ರಮವಾಗಿ ವಿಶಿಷ್ಟಾದ್ವೈತ ಮತ್ತು ದ್ವೈತ. ಆದ್ದರಿಂದ ಸಮನ್ವಯವೆಂದರೆ ಒಂದೇ ತತ್ತ್ವದ ಅರ್ಥವು ಬರುವಂತೆ ಶಾಸ್ತ್ರದ ಹೇಳಿಕೆಗಳನ್ನು ವ್ಯಾಖ್ಯಾನಿಸುವ ಒಂದು ವಿಧಾನ. ಇದು ಎಷ್ಟೋ ವೇಳೆ ಶಾಸ್ತ್ರವಾಕ್ಯಗಳಿಗೆ ತಪ್ಪು ವಿವರಣೆಗಳನ್ನು ನೀಡುವ ಪ್ರಸಂಗಕ್ಕೆ ಎಡೆಮಾಡಿಕೊಡುತ್ತದೆ. ಇದನ್ನೇ ಸ್ವಾಮೀಜಿ 'ಶಾಸ್ತ್ರಹಿಂಸೆ' (*Text torturing*) ಎಂದು ಕರೆಯುತ್ತಿದ್ದರು. ಶ್ರೀರಾಮಕೃಷ್ಣರ ಅಭಿಪ್ರಾಯ ಇದಕ್ಕಿಂತ ಸಂಪೂರ್ಣ ಬೇರೆಯಾಗಿತ್ತು. ಅವರ ಪ್ರಕಾರ ಪ್ರಪಂಚದ ಶಾಸ್ತ್ರಗಳು ಬೇರೆ ಬೇರೆ ತತ್ತ್ವಗಳನ್ನು ಬೇರೆ ಬೇರೆ ಮಾರ್ಗಗಳನ್ನು ಬೋಧಿಸುತ್ತವೆ ಮತ್ತು ಅವೆಲ್ಲವೂ ಸತ್ಯ. ಅವರು ಹೇಳುವಂತೆ 'ಎಷ್ಟು ಮನಸ್ಸುಗಳೊ ಅಷ್ಟು ಮಾರ್ಗಗಳು.'

ಶ್ರೀ ರಾಮಕೃಷ್ಣರ ಜೀವನ ಮತ್ತು ಸಂದೇಶಗಳು ಮಾತ್ರವೇ ಎಲ್ಲ ಧರ್ಮ ಮತ್ತು ಮತಗಳನ್ನು ಅರ್ಥ ಮಾಡಿಕೊಳ್ಳಲು ಒಂದು ಸರಿಯಾದ ದೃಷ್ಟಿಕೋನವನ್ನು ಒದಗಿಸುತ್ತವೆ.

ಇದು ಧರ್ಮಸಮನ್ವಯದ ಇನ್ನೊಂದು ಮುಖ್ಯಾಂಶವನ್ನು ಸೂಚಿಸುತ್ತದೆ. ಎಲ್ಲ ಧರ್ಮಗಳು ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದಂತೆ ಹೇಳುವ ಮೂರು ಮುಖ್ಯ ವಿಷಯಗಳು ಯಾವುದೆಂದರೆ ತತ್ತ್ವ, ಹಿತ ಮತ್ತು ಪುರುಷಾರ್ಥ. ಆತ್ಯಂತಿಕ ಸತ್ಯದ ಸ್ವರೂಪದ ಬಗ್ಗೆ ಇರುವ ದಾರ್ಶನಿಕ ವಿಚಾರಗಳೇ ತತ್ತ್ವ. ಈ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಅನುಷ್ಠಾನ ವಿಧಾನಗಳೇ ಹಿತ. ಸಾಧಕನು ಪಡೆಯುವ ಸತ್ಯಸಾಕ್ಷಾತ್ಕಾರ ಅಥವಾ ಆಧ್ಯಾತ್ಮಿಕ ಅನುಭವವೇ ಪುರುಷಾರ್ಥ. ಈ ಮೂರು ಹಂತಗಳಲ್ಲಿ ಸಮನ್ವಯವನ್ನು ಸಾಧಿಸಿದಾಗಲೇ ನಿಜವಾದ ಧರ್ಮಸಮನ್ವಯವು ಸಾಧ್ಯವಾಗುವಂತಹುದು. ವೇದದಲ್ಲಿ ಬರುವ 'ಸತ್ಯವು ಒಂದೇ, ಜ್ಞಾನಿಗಳು ಅದನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ' ಎಂಬ ಹೇಳಿಕೆಯು ತತ್ತ್ವಸಮನ್ವಯವನ್ನು ಮಾಡುತ್ತದೆ. ಗೀತೆಯಲ್ಲಿ ಬರುವ 'ಜನರು ಎಲ್ಲೆಲ್ಲಿಯೂ ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ' ಎಂಬ ಹೇಳಿಕೆಯು ಹಿತ-ಸಮನ್ವಯಕ್ಕೆ ಸಂಬಂಧಿಸಿರುತ್ತದೆ. ಶ್ರೀರಾಮಕೃಷ್ಣರು ಮಾತ್ರ ತತ್ತ್ವ, ಹಿತ ಮತ್ತು ಪುರುಷಾರ್ಥ—ಈ ಮೂರು ಹಂತಗಳಲ್ಲಿ ಧರ್ಮಸಮನ್ವಯವನ್ನು ಮಾಡಿದರು.

ಇಷ್ಟೇ ಅಲ್ಲದೆ ಶ್ರೀರಾಮಕೃಷ್ಣರು ಬರುವುದಕ್ಕೆ ಮುಂಚೆ ಎಲ್ಲ ಧರ್ಮಗಳ ಸಮಾನ ಪ್ರಾಮಾಣ್ಯವನ್ನು ಭಾರತದಲ್ಲಿಯೂ ಕೂಡ ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ. ಯಾವುದೇ ಧರ್ಮ ಅಥವಾ ಮಾರ್ಗವನ್ನಾಗಲಿ ಬೋಧಿಸುವುದಕ್ಕೆ ಮತ್ತು ಅನುಕರಿಸುವುದಕ್ಕೆ ಪೂರ್ಣ ಸ್ವಾತಂತ್ರ್ಯವಿತ್ತು ನಿಜ. ಆದರೆ ಪ್ರತಿಯೊಂದು ಮತದವರು ಮತ್ತು ಆಚಾರ್ಯರು ತಮ್ಮ ತಮ್ಮ ತತ್ತ್ವ ಅಥವಾ ಮಾರ್ಗವೇ ಪರಮ ಶ್ರೇಷ್ಠವೆಂದು ಪ್ರತಿಪಾದಿಸಲು ಪ್ರಯತ್ನಿಸಿದರು. ಶ್ರೀರಾಮಕೃಷ್ಣರೊಬ್ಬರೇ ಎಲ್ಲ ಮಾರ್ಗಗಳ ಸಾಧನೆಗಳನ್ನು ಮಾಡಿ, ಎಲ್ಲ ಮಾರ್ಗಗಳೂ ಒಂದೇ ಆತ್ಯಂತಿಕ ಗುರಿಗೆ ಒಯ್ಯುವ ಸಮಾನವಾದ ಯೋಗ್ಯ ಮಾರ್ಗಗಳೆಂದು ಸಾರಿದರು.

ಕೊನೆಯದಾಗಿ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳು ವಿಶ್ವಧರ್ಮದ ಒಂದು ಹೊಸ ಭಾವನೆಯ ಬೆಳವಣಿಗೆಗೆ ತಳಹದಿಯಾಯಿತು. ಇದುವರೆವಿಗೂ ಕ್ರೈಸ್ತ, ಬೌದ್ಧ ಮತ್ತು ಇಸ್ಲಾಂ—ಈ ಮೂರು ಪ್ರಧಾನ ಧರ್ಮದ ಅನುಯಾಯಿಗಳೂ ತಮ್ಮ ತಮ್ಮ ಧರ್ಮವೇ ನಿಜವಾದ ವಿಶ್ವಧರ್ಮವೆಂದು ಪ್ರತಿಪಾದಿಸುತ್ತಿದ್ದರು. ವಿಶ್ವಧರ್ಮದ ಹೊಸ ಭಾವನೆ ಯಾವುದೆಂದರೆ ಎಲ್ಲ ಧರ್ಮಗಳೂ ಒಂದಾಗಿ ಪರಸ್ಪರ ಸಹಕಾರದೊಡನೆ, ಒಂದನ್ನೊಂದು ಶ್ರೀಮಂತಗೊಳಿಸುತ್ತ ಒಟ್ಟಿಗೆ ಬಾಳುವುದು.

ಇಲ್ಲಿ ನಾವು ಗಮನಿಸಬೇಕಾದ ಒಂದು ವಿಷಯವೇನೆಂದರೆ ಶ್ರೀರಾಮಕೃಷ್ಣರು ಎಲ್ಲ ಧರ್ಮಗಳೂ ಒಂದೇ ಎಂದು ಹೇಳಲಿಲ್ಲ. ಬಾಹ್ಯ ಅಭಿವ್ಯಕ್ತಿಯಲ್ಲಾದರೂ ಧರ್ಮಗಳಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತದೆ. ಶ್ರೀರಾಮಕೃಷ್ಣರು ಈ ವ್ಯತ್ಯಾಸಗಳನ್ನು ಅಲ್ಲಗಳೆಯಲಿಲ್ಲ. ಆದ್ದರಿಂದಲೇ ಅವರು ಅವುಗಳನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಿದರು. ಆದರೆ ಅವೆಲ್ಲವೂ ಕೊನೆಗೆ ಒಂದೇ ಗುರಿಯನ್ನು ಸೇರುತ್ತವೆ ಎಂಬುದನ್ನು ತೋರಿಸಿದರು. ಅವರು ಎಲ್ಲ ಧರ್ಮಗಳ ಸಾರತತ್ತ್ವದ ಮೂರ್ತರೂಪವಾಗಿದ್ದರು. ಆದ್ದರಿಂದಲೆ ಸ್ವಾಮೀಜಿ ಅವರನ್ನು ಸರ್ವಧರ್ಮಸ್ವರೂಪಿ ಎಂದು ವಿವರಿಸಿದರು. ಅವರ ಜೀವನ ಮತ್ತು ಸಂದೇಶಗಳು ಮಾತ್ರವೇ ಎಲ್ಲ ಧರ್ಮ ಮತ್ತು ಮತಗಳನ್ನು ಅರ್ಥ ಮಾಡಿಕೊಳ್ಳಲು ಒಂದು ಸರಿಯಾದ ದೃಷ್ಟಿಕೋನವನ್ನು ಒದಗಿಸುತ್ತವೆ.

### ಅವತಾರ ವರಿಷ್ಠಾಯ

ಸ್ವಾಮೀಜಿ ಯಾವ ಅರ್ಥದಲ್ಲಿ ಅವತಾರವರಿಷ್ಠ ಎಂಬ ಶಬ್ದವನ್ನು ಉಪಯೋಗಿಸಿದರು? ಅವರು ಚಿಕ್ಕಂದಿನಲ್ಲಿ ಶ್ರೀರಾಮಕೃಷ್ಣರನ್ನು ಅವತಾರವೆಂದು ಒಪ್ಪಿಕೊಳ್ಳಲೇ ಇಲ್ಲ. 'ಸಾವಿರಾರು ಜನರು ಬೇಕಾದರೆ ನಿಮ್ಮನ್ನು ದೇವರೆಂದು ಕರೆಯಲಿ, ಆದರೆ

ನನಗೆ ದೃಢ ವಿಶ್ವಾಸವುಂಟಾಗುವವರೆಗೆ ನಾನು ಹಾಗೆ ಮಾಡುವುದಿಲ್ಲ'—ಎಂದು ಅವರು ಶ್ರೀರಾಮಕೃಷ್ಣರಿಗೆ ಹೇಳುತ್ತಿದ್ದರು. ಅದೇ ವ್ಯಕ್ತಿ ತಮ್ಮ ಮನಸ್ಸನ್ನು ಬದಲಾಯಿಸಿ ಶ್ರೀರಾಮಕೃಷ್ಣರನ್ನು ಕೇವಲ ಅವತಾರವಷ್ಟೆ ಅಲ್ಲ, ಅವತಾರವರಿಷ್ಠ ಎಂದು ಒಪ್ಪಿಕೊಳ್ಳಬೇಕಾದರೆ ಅದಕ್ಕೆ ಸಾಕಷ್ಟು ಕಾರಣಗಳಿರಬೇಕು. ಅವತಾರವರಿಷ್ಠ ಎಂದರೆ ಅವತಾರಗಳಲ್ಲೆಲ್ಲ ಪರಮಶ್ರೇಷ್ಠ ಎಂದರ್ಥ. ಇದು ಅವತಾರಗಳಲ್ಲಿ ಮೇಲು-ಕೀಳೆಂಬ ನಿಂದಾತ್ಮಕ ಭೇದ ಭಾವನೆಯನ್ನು ಸೂಚಿಸುವುದಿಲ್ಲ.

ಯಾವ ಅರ್ಥದಲ್ಲಿ ಶ್ರೀರಾಮಕೃಷ್ಣರನ್ನು ಅವತಾರವರಿಷ್ಠ ಎಂದು ಪರಿಗಣಿಸಬಹುದು? ಪ್ರತಿಯೊಂದು ಅವತಾರವನ್ನೂ ಪ್ರಜ್ಞೆಯ ವಿವಿಧ ಸ್ತರಗಳ ಪ್ರತಿನಿಧಿಯೆಂದು ಪರಿಗಣಿಸುವುದರ ಮೂಲಕ ಈ ಭಾವನೆಯನ್ನು ಒಂದು ವಿಧದಲ್ಲಿ ಅರ್ಥಮಾಡಿಕೊಳ್ಳಬಹುದು. ಕ್ರಿಸ್ತನು ಕ್ರೈಸ್ತ-ಪ್ರಜ್ಞೆಯನ್ನು ಪ್ರತಿನಿಧಿಸುತ್ತಾನೆ, ಕೃಷ್ಣನು ಕೃಷ್ಣ-ಪ್ರಜ್ಞೆಯನ್ನು ಪ್ರತಿನಿಧಿಸುತ್ತಾನೆ, ಮಹಮ್ಮದನು ಮಹಮ್ಮದ್-ಪ್ರಜ್ಞೆಯನ್ನು ಪ್ರತಿನಿಧಿಸುತ್ತಾನೆ ಇತ್ಯಾದಿ. ಶ್ರೀರಾಮಕೃಷ್ಣರು ಇವರೆಲ್ಲರ ದರ್ಶನವನ್ನು ಪಡೆದಿದ್ದರು ಮತ್ತು ಇವರೆಲ್ಲರೂ ಅವರಲ್ಲಿ ಐಕ್ಯ ಹೊಂದಿದ್ದರು. ಇದರ ಅರ್ಥವೇನೆಂದರೆ ಈ ಎಲ್ಲ ಅವತಾರ ಪುರುಷರ ಪ್ರಜ್ಞೆಯು ಶ್ರೀರಾಮಕೃಷ್ಣರ ಪ್ರಜ್ಞೆಯೊಡನೆ ಒಂದಾಯಿತು. ಆದ್ದರಿಂದ ರಾಮಕೃಷ್ಣ-ಪ್ರಜ್ಞೆಯಲ್ಲಿ ಇತರ ಎಲ್ಲಾ ಅವತಾರಗಳ ಪ್ರಜ್ಞೆಯು ಸೇರಿಕೊಂಡಿದೆ. ಶ್ರೀರಾಮಕೃಷ್ಣರು ವಿವಿಧ ಬಾಗಿಲುಗಳಿಂದ ಕೂಡಿದ ಒಂದು ದ್ವಾರಮಂಟಪವಿದ್ದಂತೆ. ರಾಮಕೃಷ್ಣ-ಪ್ರಜ್ಞೆಯ ಮೂಲಕ ಕ್ರೈಸ್ತ-ಪ್ರಜ್ಞೆ, ಕೃಷ್ಣ-ಪ್ರಜ್ಞೆ ಮುಂತಾದುವುಗಳನ್ನು ಪಡೆಯಲು ಅಥವಾ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಒಂದು ಅಂಶವೇ ಅವತಾರವರಿಷ್ಠ ಎಂಬ ಶಬ್ದದ ಬಳಕೆಯನ್ನು ಪ್ರಮಾಣೀಕರಿಸುತ್ತದೆ.

ಇನ್ನೊಂದು ಕಾರಣದಿಂದಲೂ ನಾವು ಈ ಶಬ್ದದ ಬಳಕೆಯನ್ನು ಪುಷ್ಟೀಕರಿಸಬಹುದು. ಶ್ರೀರಾಮಕೃಷ್ಣರ ಸಂದೇಶ ಮತ್ತು ಉಪದೇಶಗಳು ಅತ್ಯಂತ ವಿಶಾಲವಾಗಿದ್ದು ಎಲ್ಲವನ್ನೂ ಒಳಗೊಳ್ಳುತ್ತವೆ. ಪ್ರತಿಯೊಬ್ಬ ಅವತಾರ ಪುರುಷ ಅಥವಾ ಪ್ರವಾದಿಯು ಒಂದು ಹೊಸ ಶಾಸ್ತ್ರವನ್ನು ಲೋಕಕ್ಕೆ ನೀಡುತ್ತಾನೆ. ಶ್ರೀರಾಮಕೃಷ್ಣರು ನೀಡಿರುವ ಶಾಸ್ತ್ರವು ಬೇರೆ ಎಲ್ಲ ಶಾಸ್ತ್ರಗಳಿಗಿಂತ ಹೆಚ್ಚು ಸಮಗ್ರವೂ ಸಾರ್ವತ್ರಿಕವೂ ಆಗಿದೆ. ಇದು ಇತರ ಶಾಸ್ತ್ರಗಳನ್ನು ಮತ್ತು ಪ್ರವಾದಿಗಳನ್ನು ಅರ್ಥಮಾಡಿಕೊಳ್ಳಲು, ಅವರಲ್ಲಿ ಶ್ರದ್ಧೆಯಿಡಲು ಸಹಾಯಕವಾಗುತ್ತದೆ. ಅದು ಎಲ್ಲ ಮನೋಭಾವದ ಜನರ ಆವಶ್ಯಕತೆಯನ್ನು ಪೂರೈಸುತ್ತದೆ. ಸ್ವಾಮಿ ವಿವೇಕಾನಂದರೆ ಹೀಗೆ ಬರೆದಿದ್ದಾರೆ:

'ನಿಜವಾಗಿಯೂ ಹೇಳಬೇಕೆಂದರೆ ಚಾರಿತ್ರ್ಯದ ದೃಷ್ಟಿಯಿಂದ ಪರಮಹಂಸದೇವರು ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿರುವರು. ಅವರ ಉಪದೇಶಗಳು ಹಿಂದಿನ ಎಲ್ಲರದಕ್ಕಿಂತಲೂ ಹೆಚ್ಚು ಉದಾರವೂ ಹೆಚ್ಚು ನವ್ಯವೂ ಹೆಚ್ಚು ಪ್ರಗತಿಪರವೂ ಆಗಿವೆ. ಹಿಂದಿನ ಆಚಾರ್ಯರುಗಳೆಲ್ಲರೂ ಏಕಪಕ್ಷೀಯರಾಗಿದ್ದರು. ಆದರೆ ಈ ಹೊಸ ಅವತಾರಪುರುಷರ ಉಪದೇಶವು ಏನೆಂದರೆ ಒಂದು ಹೊಸ ಸಮಾಜವನ್ನು ರೂಪಿಸಲು ಯೋಗ, ಭಕ್ತಿ, ಜ್ಞಾನ ಮತ್ತು ಕರ್ಮಗಳ ಉತ್ತಮಾಂಶಗಳನ್ನೆಲ್ಲ ಒಂದುಗೂಡಿಸಬೇಕು ಎಂಬುದು... ಹಳೆಯದೂ ಒಳ್ಳೆಯದೆ, ಆದರೆ ಈ ಯೋಗ-ಸಮುಚ್ಚಯ ಈ ಯುಗದ ಹೊಸ ಧರ್ಮ. ಜ್ಞಾನಭಕ್ತಿಗಳನ್ನು ಎಲ್ಲರಿಗೂ, ಮೇಲು ಕೀಳೆಂಬ ಭೇದವಿಲ್ಲದೆ, ಲಿಂಗ ಅಥವಾ ವಯೋಭೇದಗಳಿಲ್ಲದೆ ಪ್ರಚಾರ ಮಾಡಬೇಕು—ಇದೇ ಹೊಸ ಧರ್ಮ.'

ಜ್ಞಾನಭಕ್ತಿಗಳನ್ನು ಎಲ್ಲರಿಗೂ, ಮೇಲು ಕೀಳೆಂಬ ಭೇದವಿಲ್ಲದೆ; ಲಿಂಗ ಅಥವಾ ವಯೋಭೇದಗಳಿಲ್ಲದೆ ಪ್ರಚಾರ ಮಾಡಬೇಕು

**—ಇದೇ ಹೊಸ ಧರ್ಮ.**

ಶ್ರೀರಾಮಕೃಷ್ಣರ ವ್ಯಕ್ತಿತ್ವದ ಮಾತೃಭಾವವನ್ನು ಪ್ರಸ್ತಾಪಿಸದೆ ಅವರ ಅವತಾರತ್ವದ ವಿವರಣೆಯು ಪೂರ್ಣವಾಗುವುದಿಲ್ಲ. ಮಾತೃಭಾವ ಶಬ್ದಕ್ಕೆ ಎರಡು ಅರ್ಥಗಳಿವೆ ಎಂಬುದನ್ನು ಮೊದಲೇ ಸೂಚಿಸಿರುವೆವು. ಇದರಲ್ಲಿ ಮೊದಲನೆಯ ಅರ್ಥವಾದ ತಾಯಿಯ ವಿಷಯದಲ್ಲಿ ಮಗುವಿನ ಭಾವವನ್ನು ಆಗಲೇ ಚರ್ಚಿಸಿಯಾಗಿದೆ. ಎರಡನೆಯ ಅರ್ಥವಾದ ಮಗುವಿನ ವಿಷಯದಲ್ಲಿ ತಾಯಿಯ ಭಾವವನ್ನು ಚರ್ಚಿಸಬೇಕಾಗಿದೆ. ಶ್ರೀರಾಮಕೃಷ್ಣರ ಅವತಾರತ್ವದ ಒಂದು ಅಪೂರ್ವ ವೈಶಿಷ್ಟ್ಯವೆಂದರೆ ಅವರ ವ್ಯಕ್ತಿತ್ವದಲ್ಲಿ ಕಂಡುಬರುವ ಮಾತೃತ್ವದ ಲಕ್ಷಣ. ಶ್ರೀಮಾತೆ ಶಾರದಾದೇವಿಯವರು ಒಮ್ಮೆ ಮಾತಿನ ಸಂದರ್ಭದಲ್ಲಿ ಒಬ್ಬ ಶಿಷ್ಯನಿಗೆ ಹೀಗೆ ಹೇಳುತ್ತಾರೆ:

'ಮಗು, ಶ್ರೀರಾಮಕೃಷ್ಣರು ಪ್ರಪಂಚದ ಎಲ್ಲರ ಬಗ್ಗೆಯೂ ಒಂದು ಮಾತೃಭಾವವನ್ನು ಇಟ್ಟುಕೊಂಡಿದ್ದರು ಎಂಬುದು ನಿನಗೆ ತಿಳಿಯದೆ? ಈ ದಿವ್ಯ ಮಾತೃಭಾವವನ್ನು ಪೂರ್ಣ ಅಭಿವ್ಯಕ್ತಗೊಳಿಸಲು ಅವರು ನನ್ನನ್ನು ಈ ಪ್ರಪಂಚದಲ್ಲಿ ಬಿಟ್ಟು ಹೋಗಿರುವರು.' ಶ್ರೀರಾಮಕೃಷ್ಣರೇ ಹೇಳುತ್ತಿದ್ದರು ತಮಗೆ ಬಾಬ (ತಂದೆ), ಗುರು ಮತ್ತು ಕರ್ತಾ (ಒಡೆಯ)— ಈ ಶಬ್ದಗಳನ್ನು ಕೇಳಲಾಗುವುದಿಲ್ಲ ಎಂದು. ಅವರು ತಂದೆ, ಗುರು, ಮತ್ತು ಒಡೆಯ —ಈ ಮೂರೂ ಅಲ್ಲದಿದ್ದರೆ ಮತ್ತೇನು? ಅವರು ತಮ್ಮ ಅನೇಕ ಶಿಷ್ಯರಿಗೆ ತಾಯಿಯಾಗಿದ್ದರು. ಮಹಾಪುರುಷ್ ಮಹಾರಾಜ್, ಗಿರೀಶ್‌ಚಂದ್ರ ಘೋಷ್ ಮುಂತಾದವರು ತಮ್ಮ ಸವಿ ನೆನಪುಗಳಲ್ಲಿ ಇದನ್ನು ಪ್ರಸ್ತಾಪಿಸಿರುವರು. ಶ್ರೀಮಾತೆಯವರೂ ಕೂಡ ಅವರನ್ನು ಜಗನ್ಮಾತೆಯೆಂದು ಪರಿಗಣಿಸುತ್ತಿದ್ದರೆಂದು ಕಂಡುಬರುತ್ತದೆ. ಶ್ರೀರಾಮಕೃಷ್ಣರಿಗೆ ತಮ್ಮ ಶಿಷ್ಯರ ಮೇಲಿದ್ದ ತೀವ್ರ ಪ್ರೀತಿಯನ್ನು ಬೇರೆ ಯಾವ ರೀತಿಯಲ್ಲೂ ವಿವರಿಸಲಾಗುವುದಿಲ್ಲ. ಕೇವಲ ತಾಯಿ ಮಾತ್ರ ಅಷ್ಟು ತೀವ್ರ ಮತ್ತು ಶುದ್ಧ ಪ್ರೀತಿಯನ್ನು ತೋರಿಸಬಲ್ಲಳು.

ನಾವು ಚರ್ಚಿಸುತ್ತಿರುವ ಪ್ರಣಾಮ ಮಂತ್ರವು ರಾಮಕೃಷ್ಣರಿಗೆ ನಮಿಸುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಮಹಾತ್ಮರಾದ ಸ್ವಾಮಿ ವಿವೇಕಾನಂದರ 'ರಾಮಕೃಷ್ಣ' ನಾಮದ ವೈಭವದ ಮೇಲೆ ಒಂದು ಪೂರ್ಣಸ್ತೋತ್ರವನ್ನು ರಚಿಸಿರುವರು. ಶತಶತಮಾನಗಳವರೆಗೆ ಮಿಲಿಯಗಟ್ಟಳೆ ಜನರ ಹೃದಯವನ್ನು ಬೆಳಗುವ ಅಪೂರ್ವಶಕ್ತಿ ಈ ಶ್ರೇಷ್ಠ ನಾಮದಲ್ಲಿದೆ.